ಹೃದಯ ಮತ್ತಷ್ಟು ವೇಗವಾಗಿ ರಕ್ತವನ್ನು ಪಂಪು ಮಾಡಲು ಪ್ರಯತ್ನಿಸುತ್ತೆ. ಹೇಗಾದರೂ ರಕ್ತವನ್ನು ದೂಡಿ, ಮೆದುಳಿಗೆ ತಲುಪಿಸಬೇಕು ಅನ್ನೋದೇ ಅದರ ಪ್ರಯತ್ನ. ಆದರೆ, ಹಿಂದಿನಿಂದ ತಳ್ಳುವಿಕೆ ಹೆಚ್ಚಿ, ಮುಂದೆ ಹೋಗಲಿಕ್ಕೆ ಆಗ್ತಿಲ್ಲ ಅನ್ನುವಾಗ ಬೇರೆ ದಾರಿ ಇಲ್ಲದೆ ಆ ನರ ಒಡೆದು ಹೋಗುತ್ತೆ. ಇನ್ನೂ ಕೆಲವು ಕೇಸ್‌ಗಳಲ್ಲಿ ಬೇರ್‍ಯಾವುದೇ ಕಾರಣದಿಂದ ರಕ್ತನಾಳವೊಂದು ಒಡೆದುಹೋಗುತ್ತೆ. ಮುಂದಿನದನ್ನು ಆಗಲೇ ಹೇಳಿದೆನಲ್ಲಾ?''

''ಬೇರೆ ಕಾರಣಗಳು ಅಂದರೆ?''

ಅವರ ಮುಖವನ್ನೇ ದಿಟ್ಟಿಸುತ್ತಾ ಆಸಕ್ತಿಯಿಂದ ಕೇಳಿದೆ.

''ಅಪಘಾತ ಆಗಿರಬಹುದು. ಅಥವಾ ಹುಟ್ಟಿನಿಂದಲೇ ಆ ನರ ದುರ್ಬಲವಾಗಿರಬಹುದು. ಇಲ್ಲ, ಯಾವುದೋ ಮಾತ್ರೆ, ಮೆಡಿಸಿನ್‌ಗಳ ಅಡ್ಡ ಪರಿಣಾಮದಿಂದಲೂ ಆ ನರ ಊನವಾಗಿರಬಹುದು. ಇಂಥದ್ದೇ ಅಂತ ಹೇಳಬರುವುದಿಲ್ಲ.''

ಅಷ್ಟೆಂದ ನ್ಯೂರಾಲಜಿಸ್ಟ್ ದೀರ್ಘವಾಗಿ ಉಸಿರೆಳೆದುಕೊಂಡರು.



''ಹಾಗಾದರೆ ಸ್ಟ್ರೋಕ್ ಆದ ಎಲ್ಲರಿಗೂ, ಅಥವಾ ಹೆಚ್ಚಿನವರಿಗಾದ್ರೂ ಹೆಮರೇಜೇ ಆಗಬೇಕಲ್ಲಾ?'' ಕುತೂಹಲದಿಂದ ಪ್ರಶ್ನಿಸಿದೆ.

''ಇಲ್ಲ ಶರತ್, ಹಾಗೇ ಆಗಬೇಕಂತೇನೂ ಇಲ್ಲ. ಒಂದೊಂದು ದೇಹವೂ ಪ್ರತ್ಯೇಕವಾದುದು. ಯಾವ ಶರೀರ, ಯಾವ ಪರಿಸ್ಥಿತಿಗೆ, ಹೇಗೆ ಪ್ರತಿಕ್ರಿಯಿಸುತ್ತದೋ ಹೇಳಬರುವುದಿಲ್ಲ. ಒಬ್ಬ ವ್ಯಕ್ತಿಯ ದೇಹಪ್ರಕೃತಿ, ಆತನ ಬದುಕಿನ ರೀತಿ, ಆ ಕ್ಷಣಕ್ಕೆ ಆತನ ದೇಹ ಪ್ರತಿಕ್ರಿಯಿಸುವ ಬಗೆ, ಆಘಾತದ ತೀವ್ರತೆ, ಕೊಡುವ ಪ್ರಥಮ ಚಿಕಿತ್ಸೆ... ಇವೆಲ್ಲವುಗಳ ಮೇಲೆ ಅವನಿಗಾಗುವ ಹೆಮರೇಜ್ ಅಥವಾ ಸ್ಟ್ರೋಕ್ ಅವಲಂಬಿತವಾಗಿರುತ್ತದೆ. ಇದನ್ನೇ ಸಾಮಾನ್ಯ ಜನರು ಹಣೆಬರಹ ಅಥವಾ ಅದೃಷ್ಟ ಅನ್ನುವುದು.''

ವೈದ್ಯರ ಮಾತಿಗೆ ಕಿವಿಯಾಗುತ್ತಾ ಕುಳಿತಿದ್ದ ನನ್ನ ತಲೆಯಲ್ಲಿ ವಿಚಿತ್ರ ಭಾವವೊಂದು ಗೂಡುಕಟ್ಟಿಕೊಂಡಿತು. ಕಲ್ಲನ್ನು ಬೇಕಾದರೂ ಕುಟ್ಟಿ ಪುಡಿಮಾಡಬಲ್ಲಷ್ಟು ಬಲಶಾಲಿಯಾದವನು ಮರುಕ್ಷಣವೇ ಸ್ವಂತ ಕಾಲಿನ ಮೇಲೆ ನಿಲ್ಲಲಾರದಷ್ಟು ದುರ್ಬಲನಾಗುತ್ತಾನೆಂದರೆ, ಮನುಷ್ಯನ ಬದುಕು ಎಷ್ಟೊಂದು ಅನಿಶ್ಚಿತವಲ್ಲವೇ? ಅನ್ನಿಸಿತು. ಬೀಳ್ಕೊಟ್ಟ ವೈದ್ಯರ ಕಿರುನಗೆಯನ್ನು ಕಣ್ಣಲ್ಲಿ ದಾಖಲಿಸಿಕೊಂಡು ಅವರ ಕೊಠಡಿಯಿಂದ ಹೊರ ಬಿದ್ದೆ. ಬೆಳಗ್ಗೆ ಮಂದಾರ ಹಾಗೂ ರಾತ್ರೆ ನಾನು ಮಾವನ ಜೊತೆಗೆ ಆಸ್ಪತ್ರೆಯಲ್ಲಿರುವುದೆಂದು ತೀರ್ಮಾನಿಸಿಕೊಂಡಿದ್ದೆವು. ಮೆಲ್ಲನೆ ನಡೆಯುತ್ತಾ ಮಾವನಿದ್ದ ನ್ಯೂರೋ ವಾರ್ಡನ್ನು ಹೊಕ್ಕೆ. ಅಲ್ಲಿ, ಬೆಡ್ಡಿನ ಮೇಲೆ, ಬೋಳಿಸಿದ ತಲೆಯ ತುಂಬಾ ಬ್ಯಾಂಡೇಜು ಕಟ್ಟಿಸಿಕೊಂಡ ವಿಕಾರ ಸ್ಥಿತಿಯಲ್ಲಿ ಮಲಗಿದ್ದ ನಾಣಿ ಮಾವ! ಸಂಕ್ರಾಂತಿಗೋ, ದೀಪಾವಳಿಗೋ ಒಮ್ಮೆ ನೋಡುವ ನನಗೇ ಅವನ ಈ ಸ್ಥಿತಿ ನೋಡಿ ಕರುಳಿಗೆ ಕುಟುಕಿದಂತಾಗುತ್ತಿದೆ. ಇನ್ನು, ಅವನ ಮಡಿಲಿನಲ್ಲೇ ಆಡಿ ಬೆಳೆದ ಮಂದಾ... ಅವಳಿಗೆ ಹೇಗಾಗಬೇಡ?

ರೋಗಿಗಳ ನರಳಾಟ, ಯಂತ್ರಗಳ ಬೀಪ್ ಬೀಪ್‌ನಿಂದ ತುಂಬಿದ್ದ ವಾರ್ಡ್ ಕೋಣೆಯಲ್ಲಿ ಸಮಯವೂ ಕಾಲು ಮುರಿದು ಮಂಚ ಸೇರಿದಂತಿತ್ತು. ಶಬ್ದವೆಂದರೆ ಆಗದ ಮಾವನಿಗೆ ಇದೆಲ್ಲದರಿಂದ ಕಿರಿಕಿರಿಯಾಗುತ್ತಿಲ್ಲವೇ? ಅವನ ಅನಾರೋಗ್ಯಕ್ಕೆ ಅದೂ ಕಾರಣವಾಗುತ್ತಿರಬಹುದಲ್ಲವೇ? ಆದರೂ ಅದನ್ನು ಕಂಡುಹಿಡಿಯುವವರು ಯಾರಿದ್ದಾರೆ? ದೇಹದ ಕಾಯಿಲೆ ಕಂಡುಹಿಡಿಯಲಿಕ್ಕೆ ವೈದ್ಯರೂ, ಯಂತ್ರಗಳೂ, ಔಷಧಿಗಳೂ ಇವೆ. ಆದರೆ, ಮನಸ್ಸಿನ ಒಳಹೋಗಲಿಕ್ಕೆ ಏನಿದೆ? ಹೀಗೆಲ್ಲಾ ಯೋಚಿಸುತ್ತಾ ಈ ಲೋಕದವನೇ ಅಲ್ಲವೆಂಬಂತೆ ಗಾಢವಾದ ನಿದ್ರೆಯಲ್ಲಿದ್ದ ಮಾವನನ್ನೊಮ್ಮೆ